152ನೇ/ (84)
4RR
2311

# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಡಾ.ತೇಜಸ್ವಿನಿಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಎಸ್.ರುದ್ರೇಗೌಡ ಹಾಗೂ ಇತರರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ :**

ಪ್ರಸ್ತುತ ಸಂದರ್ಭದಲ್ಲಿ ಬೆಲೆ ಏರಿಕೆ ಹಾಗೂ ಬರಪೀಡಿತ ಸಮಸ್ಯೆಯಿಂದಾಗಿ ಗ್ರಾಮೀಣ ರೈತಾಪಿ ಸಮುದಾಯವು ಸಂಕಷ್ಟಕ್ಕೀಡಾಗಿದ್ದು, ನಷ್ಟವನ್ನು ಅನುಭವಿಸುತ್ತಿವೆ. ಹೀಗಾಗಿ ರೈತರಿಗೆ ಉತ್ಪಾದನಾ ವೆಚ್ಚವನ್ನು ಸರಿದೂಗಿಸಿಕೊಂಡು ತಮ್ಮ ಹೈನುಗಾರಿಕೆ ಕಸುಬನ್ನು ನಿರ್ಭಾಧಿತವಾಗಿ ಮುಂದುವರೆಸಲು ಕರ್ನಾಟಕ ಸರ್ಕಾರದ ಪಶುಸಂಗೋಪನಾ ಇಲಾಖೆಯು ಪ್ರಸ್ತುತ ಇರುವ ಪ್ರತಿ ಲೀಟರ್ ಹಾಲಿನ ದರವನ್ನು ಕನಿಷ್ಟ 5 ರೂ.ಗೆ ಹೆಚ್ಚಿಸಲು ಕ್ರಮವಹಿಸುವ ಬಗ್ಗೆ ಪ್ರಸಾಪಿಸುತ್ತಿದ್ದೇವೆ.

**ಹೇಳಿಕೆ:**

ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯಲ್ಲಿ 15 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 24,356 ಗ್ರಾಮಗಳನ್ನೊಳಗೊಂಡಂತೆ 15,689 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 4,106 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಒಳಗೊಂಡಂತೆ ಒಟ್ಟು 27.00 ಲಕ್ಷ ಹಾಲು ಉತ್ಪಾದಕ ಸದಸ್ಯರು ನೊಂದಣಿಯಾಗಿದ್ದು, ಸರಾಸರಿ 9.25 ಲಕ್ಷ ಉತ್ಪಾದಕರಿಂದ ದಿನವಹಿ 83.40 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸಿ ಪ್ರತಿ ಲೀಟರ್ ಹಾಲಿಗೆ ರೂ.32.43 ರಂತೆ ಸರಾಸರಿ 27.03 ಕೋಟಿ ರೂ.ಗಳ ಮೊತ್ತವನ್ನು ಉತ್ಪಾದಕರಿಗೆ ನೇರವಾಗಿ ಬ್ಯಾಂಕ್ ಮೂಲಕ ಪಾವತಿಸಲಾಗುತ್ತಿದೆ. ಪ್ರಸ್ತುತ ಸಾಲಿನ ಸರಾಸರಿ ದಿನವಹಿ ಶೇಖರಣೆ 83.35 ಲಕ್ಷ ಲೀಟರ್ ಇದ್ದು, ಕಳೆದ ಸಾಲಿನಲ್ಲಿ 81.52 ಲಕ್ಷ ಲೀಟರ್ ಹಾಲು ಸಂಗ್ರಹವಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ. ಶೇ.2 ರಷ್ಟು ಹೆಚ್ಚಾಗಿರುತ್ತದೆ. ಪ್ರಸ್ತುತ ರಾಜ್ಯದ ಹಾಲು ಖರೀದಿ ದರ ಪ್ರತಿ ಲೀಟರ್‌ಗೆ ಸರಾಸರಿ ರೂ.32.43 ಇದ್ದು, (**ಅನುಬಂಧ-1 ರಲ್ಲಿ** ನೀಡಲಾಗಿದೆ) ಹೊರ ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ರಾಜ್ಯದಲ್ಲಿ ಹಾಲಿನ ಖರೀದಿ ದರ ಪ್ರತಿ ಲೀಟರ್‌ಗೆ ರೂ.3.50 ರಿಂದ ರೂ.9.00 ವರೆಗೆ ಕಡಿಮೆ ಇರುತ್ತದೆ. (ವಿವರವನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ).

ದಿನಾಂಕ:1.8.2023 ರಿಂದ ಪ್ರತಿ ಲೀಟರ್ ಹಾಲಿನ ಮಾರಾಟ ದರವನ್ನು ರೂ.3/-ಗಳಿಗೆ ಹೆಚ್ಚಿಸಿದ್ದು, ಹೆಚ್ಚಿಸಿದ ಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೆ ಪಾವತಿಸಲಾಗುತ್ತಿದೆ. ರೈತರ ಉತ್ಪಾದನಾ ವೆಚ್ಚವನ್ನು ಸರಿದೂಗಿಸಲು ಕರ್ನಾಟಕ ಹಾಲು ಮಹಾಮಂಡಳದ ಒಕ್ಕೂಟಗಳ ವ್ಯಾಪ್ತಿಯಲ್ಲಿ ಅನೇಕ ರೀತಿಯ ತಾಂತ್ರಿಕ ಸೌಲಭ್ಯಗಳು, ಸರಳ ಸೂತ್ರೀಕರಣದ ಅನುಸಾರ ಪಶು ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ, ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನವನ್ನು ಸಹ ನೀಡಲಾಗುತ್ತಿದೆ.

ಮುಂದುವರೆದು, ಸರ್ಕಾರವು ಇತ್ತೀಚೆಗೆ ದಿನಾಂಕ:01.08.2023 ರಿಂದ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.3.00 ಹೆಚ್ಚಿಸಿದ್ದು, ಹೆಚ್ಚಿನ ಮೊತ್ತವನ್ನು ನೇರವಾಗಿ ಹಾಲು ಉತ್ಪಾದಕರಿಗೆ ನೀಡಲು ಕ್ರಮವಹಿಸಲಾಗಿರುವುದರಿಂದ ಸಧ್ಯಕ್ಕೆ ಹೈನುಗಾರರಿಗೆ ನೀಡಲಾಗುತ್ತಿರುವ ಸಬ್ಸಿಡಿ ಮತ್ತು ಪ್ರೋತ್ಸಾಹ ಧನವನ್ನು ಪ್ರತಿ ಲೀಟರಿಗೆ ರೂ.5/- ಕ್ಕಿಂತ ಹೆಚ್ಚು ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

**ಸಂಖ್ಯೆ:ಪಸಂಮೀ 54 ಸಲೆವಿ 2024**

**(ಕೆ. ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

ಡಾ.ತೇಜಸ್ವಿನಿಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಎಸ್.ರುದ್ರೇಗೌಡ ಹಾಗೂ ಇತರರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ

**ಅನುಬಂಧ-1**

| ಕ್ರ. ಸಂ. | ಒಕ್ಕೂಟದ ಹೆಸರು | ಉತ್ಪಾದಕರಿಗೆ ಪಾವತಿಸುತ್ತಿರುವ ಮೊತ್ತ (ಪ್ರತಿ ಲೀಟರ್‌ಗೆ) ರೂ.ಗಳಲ್ಲಿ |
|---|---|---|
| 1 | ಬೆಂಗಳೂರು | 32.15 |
| 2 | ಕೋಲಾರ | 33.40 |
| 3 | ತುಮಕೂರು | 32.78 |
| 4 | ಹಾಸನ | 33.20 |
| 5 | ಮಂಡ್ಯ | 32.00 |
| 6 | ಮೈಸೂರು | 34.10 |
| 7 | ಚಾಮರಾಜನಗರ | 31.20 |
| 8 | ಶಿವಮೊಗ್ಗ | 31.07 |
| 9 | ದಕ್ಷಿಣಕನ್ನಡ | 35.85 |
| 10 | ಧಾರವಾಡ | 31.00 |
| 11 | ಬೆಳಗಾವಿ | 31.10 |
| 12 | ವಿಜಯಪುರ | 30.90 |
| 13 | ಬಳ್ಳಾರಿ | 31.60 |
| 14 | ಕಲಬುರಗಿ | 32.09 |
| 15 | ಹಾವೇರಿ | 34.00 |
| | **ಸರಾಸರಿ ಮೊತ್ತ** | **32.43** |

**ಡಾ.ತೇಜಸ್ವಿನಿಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಎಸ್.ರುದ್ರೇಗೌಡ ಹಾಗೂ ಇತರರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ**

**ಅನುಬಂಧ-2**

ಹೊರ ರಾಜ್ಯದಲ್ಲಿರುವ ಹಾಲಿನ ಸರಾಸರಿ ಖರೀದಿ ಮತ್ತು ಮಾರಾಟ ದರದ ವಿವರ:

| **ರಾಜ್ಯದ ಹೆಸರು** | ಕರ್ನಾಟಕ | ಆಂಧ್ರಪ್ರದೇಶ | ಕೇರಳ | ತಮಿಳುನಾಡು | ಮಹಾರಾಷ್ಟ್ರ | ಗುಜರಾತ್ |
|---|---|---|---|---|---|---|
| **ಹಾಲಿನ ಖರೀದಿ ದರ** | 32.42 | 35.99 | 41.76 | 32.35 | 29.72 | 36.75 |
| **ಹಾಲಿನ ಮಾರಾಟ ದರ** | 42/- | 58/- | 52/- | 40/- | 54/- | 54/- |
| **ವ್ಯತ್ಯಾಸ** | 9.58 | 22.01 | 10.24 | 7.65 | 24.28 | 17.25 |